# ಫ್ಲಿಪ್ ಕಾರ್ಟ್ ನಿಂದ ನೈಜ ಶಾಪಿಂಗ್ ಅನುಭವಕ್ಕಾಗಿ ವಾಯ್ಸ್ ಅಸಿಸ್ಟೆಂಟ್ ಸೇವೆ

- **ಧ್ವನಿ ಆಧಾರಿತ ಆನ್ ಲೈನ್ ಶಾಪಿಂಗ್ ಸೇವೆ**
- **ಸದ್ಯಕ್ಕೆ ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ಲಭ್ಯ**
- **ಫ್ಲಿಪ್ ಕಾರ್ಟ್ ನ ಗ್ರಾಸರಿ ಸ್ಟೋರ್, ಸೂಪರ್ ಮಾರ್ಟ್ ನಲ್ಲಿ ಲಭ್ಯ**

ಬೆಂಗಳೂರು, ಜೂನ್ 9, 2020: ಭಾರತ ಮೂಲದ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ಗ್ರಾಹಕರ ಇ-ಕಾಮರ್ಸ್ ಪಯಣವನ್ನು ಮತ್ತಷ್ಟು ಸುಲಭ ಮತ್ತು ನೈಸರ್ಗಿಕವಾಗಿಸುವ ನಿಟ್ಟಿನಲ್ಲಿ ವಾಯ್ಸ್ ಅಸಿಸ್ಟೆಂಟ್ ಅನ್ನು ಪರಿಚಯಿಸಿದೆ. ಫ್ಲಿಪ್ ಕಾರ್ಟ್ ನ ಗ್ರಾಸರಿ ಸ್ಟೋರ್ ಮತ್ತು ಸೂಪರ್ ಮಾರ್ಟ್ ನಲ್ಲಿ ಪರಿಚಯಿಸಲಾಗಿರುವ ವಾಯ್ಸ್ ಅಸಿಸ್ಟೆಂಟ್ ಬಹುಭಾಷೆಯಲ್ಲಿ ವಾಯ್ಸ್ ಕಮಾಂಡ್ ಗಳನ್ನು ಬಳಕೆ ಮಾಡುವ ಮೂಲಕ ಅತ್ಯಂತ ಸುಲಭವಾಗಿ ತಮಗೆ ಬೇಕಾದ ವಸ್ತುಗಳನ್ನು ಅನ್ವೇಷಣೆ ಮಾಡಬಹುದು ಮತ್ತು ಖರೀದಿಸಬಹುದಾಗಿದೆ. ಆರಂಭದಲ್ಲಿ ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ಈ ಸೇವೆ ಲಭ್ಯವಿದೆ.

ಫ್ಲಿಪ್ ಕಾರ್ಟ್ ನ ಗ್ರಾಸರಿ ಅಂಡ್ ಜನರಲ್ ಮರ್ಕೆಂಡೈಸ್ & ಫರ್ನಿಚರ್ ನ ಹಿರಿಯ ಉಪಾಧ್ಯಕ್ಷ ಮನೀಶ್ ಕುಮಾರ್ ಅವರು ಈ ಬಗ್ಗೆ ಮಾತನಾಡಿ, ``ಧ್ವನಿ ಆಧಾರಿತ ಶಾಪಿಂಗ್ ನೈಸರ್ಗಿಕವಾಗಿದೆ ಮತ್ತು ನಮ್ಮ ಗ್ರಾಹಕರಿಗೆ ನಿಜವಾದ ಸಂವಾದಸಹಿತವಾದ ಶಾಪಿಂಗ್ ಅನುಭವಗಳನ್ನು ಸಂಪೂರ್ಣವಾದ ನೈಸರ್ಗಿಕವಾದ ರೀತಿಯಲ್ಲಿ ನೀಡಲು ಬಯಸಿದ್ದೆವು. ನಮ್ಮ ದೇಸೀಯವಾಗಿ ಅಭಿವೃದ್ಧಿಪಡಿಸಿದ ಮತ್ತು ಎಐ ಆಧಾರಿತ ವಾಯ್ಸ್ ಅಸಿಸ್ಟೆಂಟ್ ಅನ್ನು ದಿನಸಿ ವಿಭಾಗದಲ್ಲಿ ಪರಿಚಯಿಸಿದ್ದೇವೆ. ಇದು ಶಾಪಿಂಗ್ ಅನ್ನು ಸರಳಗೊಳಿಸಲಿದೆ ಮತ್ತು ಹೆಚ್ಚು ಹೆಚ್ಚು ಖರೀದಿ ಮಾಡಲು ನೆರವಾಗುತ್ತದೆ. ದಿನಸಿ ವಿಭಾಗವು ಭಾರತೀಯ ಇ-ಕಾಮರ್ಸ್ ವಿಭಾಗಗಳಲ್ಲಿ ಹೆಚ್ಚು ಪ್ರಭಾವ ಬೀರದ ಕ್ಷೇತ್ರಗಳಲ್ಲಿ ಒಂದಾಗಿದೆ. ಈ ದಿನಸಿ ಕ್ಷೇತ್ರದ ಬೆಳವಣಿಗೆ ಸಾಕಷ್ಟು ಅವಕಾಶಗಳಿವೆ ಮತ್ತು ಇದಕ್ಕೆ ಗ್ರಾಹಕರ ಅಳವಡಿಕೆ ಮಾಡಿಕೊಳ್ಳಲು ಅವಕಾಶಗಳು ಲಭ್ಯವಿವೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ದಿನಸಿ ವ್ಯವಹಾರವು ಗಣನೀಯವಾಗಿ ವೃದ್ಧಿಯಾಗಿದೆ. ಈ ಹಿನ್ನೆಲೆಯಲ್ಲಿ ವಾಯ್ಸ್ ಅಸಿಸ್ಟೆಂಟ್ ಸಾಮರ್ಥ್ಯವನ್ನು ಪರಿಚಯಿಸಲು ಇದು ಸಕಾಲವಾಗಿದೆ" ಎಂದು ತಿಳಿಸಿದರು.

ಫ್ಲಿಪ್ ಕಾರ್ಟ್ ನ ಚೀಫ್ ಪ್ರೊಡಕ್ಷನ್ ಅಂಡ್ ಟೆಕ್ನಾಲಜಿ ಆಫೀಸರ್ ಜಯೇಂದ್ರನ್ ವೇಣುಗೋಪಾಲ್ ಅವರು ಮಾತನಾಡಿ, ``ದೇಶೀಯ ಇ-ಕಾಮರ್ಸ್ ಕಂಪನಿಯಾಗಿರುವ ಫ್ಲಿಪ್ ಕಾರ್ಟ್ ಮೊದಲ ಆವಿಷ್ಕಾರಗಳು ಮತ್ತು ವಿಡಿಯೋ, ಸರಳವಾದ ಭಾಷೆ ಮತ್ತು ಧ್ವನಿ ಆಧಾರಿತ ಸೇವೆಗಳನ್ನು ನೀಡುವಲ್ಲಿ ಮುಂಚೂಣಿಯಲ್ಲಿದೆ. ಇವು ಭಾರತದಲ್ಲಿ ಇ-ಕಾಮರ್ಸ್ ಕ್ಷೇತ್ರಕ್ಕೆ ಮೂಲ ಮತ್ತು ಪ್ರಮುಖ ಆಧಾರಸ್ಥಂಭಗಳಾಗಿವೆ. ನಮ್ಮ ವಿಡಿಯೋ ಮತ್ತು ವರ್ನಾಕ್ಯುಲರ್ ಕೊಡುಗೆಗಳಿಗೆ ಅಭೂತಪೂರ್ವವಾದ ಪ್ರತಿಕ್ರಿಯೆ ದೊರೆತ ಹಿನ್ನೆಲೆಯಲ್ಲಿ ಇದೇ ಹಾದಿಯಲ್ಲಿ ನಮ್ಮ ಮುಂದಿನ ಹೆಜ್ಜೆ ಇ-ಕಾಮರ್ಸ್ ನಲ್ಲಿ ಧ್ವನಿ ಆಧಾರಿತ ಸೇವೆ ಒದಗಿಸುವುದಾಗಿತ್ತು. ಈಗ ಇದನ್ನು ಪರಿಚಯಿಸಿದ್ದೇವೆ" ಎಂದು ಹೇಳಿದರು.

``ಧ್ವನಿ ಆಧಾರಿತ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ಫ್ಲಿಪ್ ಕಾರ್ಟ್ ನಲ್ಲಿನ ತಂತ್ರಜ್ಞಾನ ತಂಡವು ದೇಶಾದ್ಯಂತ ಪ್ರವಾಸ ನಡೆಸಿ ವಿವಿಧ ಬಗೆಯ ದೃಷ್ಟಿಕೋನಗಳಲ್ಲಿ ಅಧ್ಯಯನ ನಡೆಸಿ ಅದಕ್ಕೊಂದು ಮೂರ್ತಿರೂಪ ನೀಡಿದೆ. ಅಂದರೆ, ದೇಶದೆಲ್ಲೆಡೆ ವಿವಿಧ ಭಾಷೆಗಳ ಪ್ರತಿಕ್ರಿಯೆಗಳು ಮತ್ತು ಉತ್ಪನ್ನಗಳ ಗುರುತಿಸುವಿಕೆ, ಉಚ್ಚಾರಣೆ ಸೇರಿದಂತೆ ವಿವಿಧ ಬಗೆಯಲ್ಲಿ ಅಧ್ಯಯನ ನಡೆಸಿದೆ. ಹೆಚ್ಚುತ್ತಿರುವ ಆನ್ ಲೈನ್ ಶಾಪಿಂಗ್ ಸಂಸ್ಕೃತಿ ಮತ್ತು ಗ್ರಾಹಕರಿಗೆ ಸುಲಭವಾಗಲಿ ಎಂಬ ಕಾರಣಕ್ಕೆ ಈ ಧ್ವನಿ ಆಧಾರಿತ ಸೇವೆಯನ್ನು ಆರಂಭಿಸಲಾಗಿದೆ" ಎಂದು ಅವರು ತಿಳಿಸಿದರು.

## ವಾಯ್ಸ್ ಅಸಿಸ್ಟೆಂಟ್ ಹಿಂದಿನ ತಂತ್ರಜ್ಞಾನ

ಧ್ವನಿ ಗ್ರಹಿಕೆ, ನೈಸರ್ಗಿಕವಾದ ಭಾಷೆ ಅರ್ಥೈಸಿಕೊಳ್ಳುವುದು, ಯಂತ್ರ ತುರ್ಜುಮೆ ಮತ್ತು ಭಾರತೀಯ ಭಾಷೆಗಳಿಗೆ ಮಾತನಾಡಲು ಪಠ್ಯ ಸೇರಿದಂತೆ ಇನ್ನಿತರೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ತಂತ್ರಜ್ಞಾನ ತಂಡವು ವಾಯ್ಸ್ -ಫಸ್ಟ್ ಸಂಭಾಷಣೆ ಆಧಾರಿತ ಎಐ ಪ್ಲಾಟ್ ಫಾರ್ಮ್ ಅನ್ನು ಸೃಷ್ಟಿಸಿದೆ. ಈ ಪರಿಹಾರಗಳು ಹಿಂದಿಯಂತಹ ಭಾಷೆಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿವೆ. ಅಂದರೆ, ಇ-ಕಾಮರ್ಸ್ ವಿಭಾಗಗಳು ಮತ್ತು ಉತ್ಪನ್ನಗಳ ಕ್ಷೇತ್ರದಲ್ಲಿ ಆರ್ಡರ್ ಪ್ಲೇಸ್ ಮಾಡುವುದು, ಉತ್ಪನ್ನಗಳ ವಿವರಗಳನ್ನು ಅರ್ಥ ಮಾಡಿಕೊಳ್ಳುವುದು, ಉತ್ಪನ್ನಗಳಿಗೆ ಹುಡುಕಾಟ ಮಾಡುವುದು ಸೇರಿದಂತೆ ಇನ್ನಿತರೆ ಕೆಲಸಗಳನ್ನು ಈ ಪರಿಹಾರಗಳನ್ನು ನಿರ್ವಹಿಸಲಿವೆ. ದೇಸೀಯವಾಗಿ ಅಭಿವೃದ್ಧಿಪಡಿಸಿರುವ ಈ ಎಐ ಪ್ಲಾಟ್ ಫಾರ್ಮ್ ಗ್ರಾಹಕರು ಹೇಳಿದ ಅಥವಾ ಮಾತನಾಡಿದ್ದನ್ನು ಸ್ವಯಂಚಾಲಿತವಾಗಿ ಗುರುತಿಸುತ್ತದೆ. ನೈಜವಾದ ಸಮಯದಲ್ಲಿ ಲಿಪ್ಯಂತರ, ಅನುವಾದ ಮತ್ತು ಲಿಪ್ಯಂತರಣವನ್ನು ಮಾಡಲಿದೆ ಮತ್ತು ಗ್ರಾಹಕರ ಉದ್ದೇಶವನ್ನು ಅರ್ಥ ಮಾಡಿಕೊಳ್ಳಲಿದೆ. ಈ ಮೂಲಕ ಗ್ರಾಹಕರು ಶಾಪಿಂಗ್ ಸಂಬಂಧಿತ ಸಂಭಾಷಣೆಗಳನ್ನು ವಿವಿಧ ಭಾರತೀಯ ಭಾಷೆಗಳನ್ನು ಅರ್ಥ ಮಾಡಿಕೊಳ್ಳಲಿದೆ.

ಈ ವಾಯ್ಸ್ ಅಸಿಸ್ಟೆಂಟ್ ಅನ್ನು ಸಿದ್ಧಪಡಿಸಲು ಫ್ಲಿಪ್ ಕಾರ್ಟ್ ಐದು ತಿಂಗಳಿಗೂ ಹೆಚ್ಚು ಕಾಲ ಹಲವಾರು ಪಟ್ಟಣ ಮತ್ತು ನಗರಗಳಲ್ಲಿ ಅಧ್ಯಯನ ನಡೆಸಿ ಅಲ್ಲಿರುವ ಅವಕಾಶಗಳನ್ನು ಅರ್ಥ ಮಾಡಿಕೊಂಡಿದೆ. ಇದಕ್ಕೆ ಪೂರಕವಾಗಿ ಈ ವಾಯ್ಸ್ ಅಸಿಸ್ಟೆಂಟ್ ಅನ್ನು ಸಿದ್ಧಪಡಿಸಿದೆ. ಧ್ವನಿಯ ಮೂಲಕ ವಿವಿಧ ಸೇವೆಗಳು ಸುಲಭವಾಗಿ ದೊರೆಯಬೇಕೆಂಬುದು ಸೇರಿದಂತೆ ಇನ್ನೂ ಹಲವು ಬಗೆಯ ಕುತೂಹಲಕಾರಿ ಮತ್ತು ಆಸಕ್ತಿದಾಯಕ ಒಳನೋಟಗಳನ್ನು ಗ್ರಾಹಕರು ಅಧ್ಯಯನದ ಸಂದರ್ಭದಲ್ಲಿ ಹೇಳಿಕೊಂಡಿದ್ದಾರೆ. ಆದ್ದರಿಂದ, ತನ್ನ ವಾಯ್ಸ್ ಅಸಿಸ್ಟೆಂಟ್ ಗ್ರಾಹಕರ ಶಾಪಿಂಗ್ ಅನ್ನು ಮೇಲ್ಮಟ್ಟಕ್ಕೆ ಏರಿಸುತ್ತದೆ ಎಂಬ ವಿಶ್ವಾಸವನ್ನು ಫ್ಲಿಪ್ ಕಾರ್ಟ್ ಹೊಂದಿದೆ.

ಫ್ಲಿಪ್ ಕಾರ್ಟ್ ಮೊಬೈಲ್ ಆ್ಯಪ್ ಮತ್ತು ಆ್ಯಂಡ್ರಾಯ್ಡ್ ಡಿವೈಸ್ ಗಳನ್ನು ಬಳಕೆ ಮಾಡುತ್ತಿರುವ ಬಳಕೆದಾರರಿಗೆ ಪ್ರಸ್ತುತ ಇಂಗ್ಲೀಷ್ ಮತ್ತು ಹಿಂದಿ ಭಾಷಿಕರಿಗೆ ಈ ವಾಯ್ಸ್ ಅಸಿಸ್ಟೆಂಟ್ ಲಭ್ಯವಿದೆ. ಈ ಅಪ್ಲಿಕೇಷನ್ ಇಂಗ್ಲೀಷ್ ಮತ್ತು ಹಿಂದಿ ಎರಡೂ ಭಾಷೆಗಳನ್ನು ಅರ್ಥ ಮಾಡಿಕೊಳ್ಳುತ್ತದೆ. ಇಷ್ಟೇ ಅಲ್ಲ, ಮಿಶ್ರಿತ ಭಾಷೆಯ ಕಮಾಂಡ್ ಗಳನ್ನೂ ಅರ್ಥೈಸಿಕೊಳ್ಳಲಿದೆ. ಗ್ರಾಸರಿ ಸ್ಟೋರ್ ನಲ್ಲಿ ಫ್ಲಿಪ್ ಕಾರ್ಟ್ ನ ವಾಯ್ಸ್ ಅಸಿಸ್ಟೆಂಟ್ ಮಾರುಕಟ್ಟೆಯಲ್ಲಿ ಮಾರಾಟ ಪ್ರತಿನಿಧಿ ಅಥವಾ ಶಾಪ್ ಕೀಪರ್ ಜತೆ ಮಾತನಾಡಿದ ರೀತಿಯಲ್ಲಿಯೇ ಮಾತನಾಡಿ ತಮ್ಮ ಗ್ರಾಸರಿ ಬಾಸ್ಕೆಟ್ ಅನ್ನು ತುಂಬಿಸಿಕೊಳ್ಳಲು ನೆರವಾಗುತ್ತದೆ.

ಗ್ರಾಹಕರು ಗ್ರಾಸರಿಗಳನ್ನು ಶಾಪಿಂಗ್ ಮಾಡುವ ಸಂದರ್ಭದಲ್ಲಿ ಒಂದು ನಿರ್ದಿಷ್ಟ ವಸ್ತುವನ್ನು ಖರೀದಿಸುವ ಬಗ್ಗೆ ಸ್ಪಷ್ಟ ಉದ್ದೇಶವನ್ನು ಹೊಂದಿರುತ್ತಾರೆ. ಫ್ಲಿಪ್ ಕಾರ್ಟ್ ನ ವಾಯ್ಸ್ ಅಸಿಸ್ಟೆಂಟ್ ತ್ವರಿತವಾಗಿ ಮತ್ತು ಸಮರ್ಪಕವಾಗಿ ಬಹು ಉತ್ಪನ್ನಗಳನ್ನು ಖರೀದಿಸಲು ನೆರವಾಗುತ್ತದೆ. ಇಷ್ಟೇ ಅಲ್ಲ, ನೈಜ ಶಾಪಿಂಗ್ ನ ಅನುಭವವನ್ನು ಈ ಶಾಪಿಂಗ್ ನೀಡುವುದಲ್ಲದೇ, ತಡೆರಹಿತ ಹಾಗೂ ನೈಸರ್ಗಿಕವಾದ ಅನುಭವವನ್ನು ನೀಡಲಿದೆ.

ಫ್ಲಿಪ್ ಕಾರ್ಟ್ ಮೊಬೈಲ್ ಆ್ಯಪ್ ಮತ್ತು ಆ್ಯಂಡ್ರಾಯ್ಡ್ ಡಿವೈಸ್ ಗಳನ್ನು ಬಳಕೆ ಮಾಡುತ್ತಿರುವ ಬಳಕೆದಾರರಿಗೆ ಪ್ರಸ್ತುತ ಇಂಗ್ಲೀಷ್ ಮತ್ತು ಹಿಂದಿ ಭಾಷಿಕರಿಗೆ ಈ ವಾಯ್ಸ್ ಅಸಿಸ್ಟೆಂಟ್ ಲಭ್ಯವಿದೆ. ಇದನ್ನು ಸದ್ಯದಲ್ಲೇ ಐಒಎಸ್ ಮತ್ತು ವೆಬ್ ಸೈಟ್ ಬಳಕೆಗೂ ಪರಿಚಯಿಸಲಾಗುತ್ತದೆ. ಕಳೆದ ಒಂದು ದಶಕದಿಂದಲೂ ಗ್ರಾಹಕ ಕೇಂದ್ರಿತ ಪರಿಹಾರಗಳನ್ನು ಅಭಿವೃದ್ಧಿಪಡಿಸುತ್ತಾ ಬಂದಿರುವ ಫ್ಲಿಪ್ ಕಾರ್ಟ್ ನ ಆವಿಷ್ಕಾರಗಳಲ್ಲಿ ಈ ದಿನಸಿಯ ವಾಯ್ಸ್ ಅಸಿಸ್ಟೆಂಟ್ ಒಂದಾಗಿದೆ.

**About Flipkart**

The Flipkart Group is one of India’s leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India’s e-commerce

revolution. With a registered customer base of over 200 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has driven us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, and PhonePe, India's fastest growing digital payments platform, the Flipkart Group is steering the transformation of commerce in India through technology.

For more details contact media@flipkart.com.